**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ವಿಜಯಪುರ, ಇವರ ನ್ಯಾಯಾಲಯ**

**ಸ್ಪೆಷಲ್ ಕೇಸ್ (ಭ್ರಷ್ಟಾಚಾರ) ನಂ.07/2021**

ಫಿರ್ಯಾದಿದಾರರು:- ಕರ್ನಾಟಕ ಸರ್ಕಾರ

*-:ವಿರುದ್ಧ:-*

ಆರೋಪಿತರು :- ಬಸವರಾಜ ತಂದೆ ಭೀಮಶಿ ತೇಲಿ

**ದಂಡ ಪ್ರಕ್ರಿಯಾ ಸಂಹಿತೆಯ ಕಲಂ. 313 ರಡಿ ಹೆಚ್ಚುವರಿ ಆಪಾದಿತನ ಹೇಳಿಕೆ**

=======

ಆಪಾದಿತನ ಹೆಸರು : ಬಸವರಾಜ ತೇಲಿ

ತಂದೆಯ ಹೆಸರು : ಭೀಮಶಿ

ವಯಸ್ಸು : 52 ವರ್ಷ

ಉದ್ಯೋಗ :

ವಾಸಸ್ಥಳ : ಸಾ: ಹಿರೇಬೇವನೂರ, ತಾ:ಇಂಡಿ, ಜಿಲ್ಲಾ: ವಿಜಯಪುರ

=======

ಪ್ರಶ್ನೆ1: ಅಭಿಯೋಜನಾ ಪರ ವಿಚಾರಣೆಯಾಗಿರುವ ಸಾಕ್ಷಿದಾರರ ಹೇಳಿಕೆಗಳನ್ನು ಕೇಳಿದ್ದಿರಲ್ಲವಾ?

ಉತ್ತರಃ

ಪ್ರಶ್ನೆಃ2. ಪ್ರಾ.ಸಾ.11 ಡಾ: ಶರಣಬಸಪ್ಪ ತಂದೆ ನೀಲಕಂಠ ಬಿರಾದಾರ, ಹಿರಿಯ ವೈಜ್ಞಾನಿಕ ಅಧಿಕಾರಿಗಳು, ವಿಧಿವಿಜ್ಞಾನ ವಿಭಾಗ, **SFSL**, ಮಡಿವಾಳ, ಬೆಂಗಳೂರು, ರವರು ತಮ್ಮ ಸಾಕ್ಷ್ಯದಲ್ಲಿ, ದಿ: 06.02.2020 ರಂದು ಅವರ ಕಚೇರಿಯಲ್ಲಿ ಮೂರು ಮೊಹರು ಮಾಡಿದ ಆರ್ಟಿಕಲಗಳನ್ನು ಅಪರಾಧ ಸಂಖ್ಯೆ: 01/2020 ಕ್ಕೆ ಸಂಬಂಧಿಸಿದಂತೆ ಉಪಪೊಲೀಸ್

ಅಧೀಕ್ಷಕರು, ಭ್ರಷ್ಟಾಚಾರ ನಿಗ್ರಹದಳ, ವಿಜಯಪುರ ರವರಿಂದ ಧ್ವನಿ ಹೋಲಿಕೆ ನಡೆಸಲು ಮದನಸಿಂಗ್.ಜಿ. ರಾಜಪುತ್ CPC ಸಂಖ್ಯೆ.1642 ರ ಮೂಲಕ ಮನವಿಯೊಂದಿಗೆ ಸ್ವೀಕರಿಸಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರ:

ಪ್ರಶ್ನೆ3. ಫ್ರಾ.ಸಾ.11 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ದಿ: 23.12.2020 ರಂದು ಸದರಿ ಆರ್ಟಿಕಲಗಳ ಪರೀಕ್ಷೆಗಾಗಿ ಅವರಿಗೆ ವಹಿಸಿದ್ದು, ಅವುಗಳನ್ನು ಪರಿಶೀಲಿಸಲಾಗಿ ಅವು ತನಿಖಾಧಿಕಾರಿಗಳು ಕಳುಹಿಸಿದ ಸರಕು ಪಟ್ಟಿಗೆ ಹೋಲಿಕೆ ಆಗುತ್ತಿದ್ದವು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರ:

ಪ್ರಶ್ನೆ4. ಫ್ರಾ.ಸಾ.11 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಸದರಿ ಆರ್ಟಿಕಲಗಳನ್ನು ದಿ: 23.12.2022 ರಿಂದ ದಿ: 28.12.2022 ರವರೆಗೆ ಪರಿಶೀಲಿಸಿ, ಗ್ರಹಿಕೆ/ಶ್ರವಣ ವಿಧಾನ, ಮತ್ತು ಧ್ವನಿ ವೈಶಿಷ್ಟ್ಯ ಹೊರತೆಗೆಯುವ ವಿಧಾನ ಹೀಗೆ ಎರಡು ವಿಧಾನಗಳನ್ನು ಅಳವಡಿಸಿಕೊಂಡು ಪರೀಕ್ಷಿಸಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರ:

ಪ್ರಶ್ನೆ:5. ಪ್ರಾ.ಸಾ.11 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಸದರಿ ಆರ್ಟಿಕಲಗಳನ್ನು ಪರೀಕ್ಷಿಸಲಾಗಿ **D**1 ರಲ್ಲಿ ದಾಖಲಾದ ಆರೋಪಿಯ ಧ್ವನಿ ಮತ್ತು **D**–13 ರಲ್ಲಿ ದಾಖಲಾದ ಧ್ವನಿಗಳು ಹೋಲಿಕೆ ಆಗಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರ:

ಪ್ರಶ್ನೆ:6. ಪ್ರಾ.ಸಾ.11 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಅದೇ ರೀತಿ **D**–1 ರಲ್ಲಿ ದಾಖಲಾದ ದೂರುದಾರರ ಧ್ವನಿ ಮತ್ತು **D**–14 ರಲ್ಲಿ ದಾಖಲಾದ ಧ್ವನಿಗಳು ಹೋಲಿಕೆ ಆಗಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರ:

ಪ್ರಶ್ನೆ:7. ಪ್ರಾ.ಸಾ.11 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಧ್ವನಿ ಪರೀಕ್ಷೆಗಳ ಆಧಾರದ ಮೇಲೆ **D**–13 ರಲ್ಲಿರುವ ಧ್ವನಿಯು ಆರೋಪಿಯದ್ದೇ ಎಂದು ಮಾದರಿ ಧ್ವನಿಯ ಪರೀಕ್ಷೆಯಿಂದ ಕಂಡು ಬಂದಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರ:

ಪ್ರಶ್ನೆ:8. ಪ್ರಾ.ಸಾ.11 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಅದೇ ರೀತಿ **D-14** ರಲ್ಲಿರುವ ಧ್ವನಿಯು ದೂರುದಾರರದ್ದು ಎಂದು ಮಾದರಿ ಧ್ವನಿಯ ಪರೀಕ್ಷೆಯಿಂದ ಕಂಡು ಬಂದಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರ:

ಪ್ರಶ್ನೆ:9. ಪ್ರಾ.ಸಾ.11 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಪರೀಕ್ಷೆಯ ನಂತರ ಸದರಿ ಆರ್ಟಿಕಲಗಳನ್ನು ಪುನಃ ಪ್ಯಾಕ ಮಾಡಿ, ಮೊಹರು ಮಾಡಿ, ನಿ.ಪಿ.34 ರ ಅವರ ಸಂಪೂರ್ಣ ವರದಿಯೊಂದಿಗೆ ತನಿಖಾಧಿಖಾರಿಗಳಿಗೆ ಕಳುಹಿಸಿಕೊಟ್ಟಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರ:

ಪ್ರಶ್ನೆ:10. ಪ್ರಾ.ಸಾ.12 ಆನಂದ ತಂದೆ ಅಪ್ಪಣ್ಣ ದೋಣಿ, ಆಗಿನ ಪೋಲಿಸ್ ಇನ್ಸಪೇಕ್ಟರ್, ಕರ್ನಾಟಕ ಲೋಕಾಯುಕ್ತ, ವಿಜಯಪುರ, ರವರು ತಮ್ಮ ಸಾಕ್ಷ್ಯದಲ್ಲಿ, ದಿ: 24.03.2023 ರಂದು ಚಾಸಾ-23 ಪೋಲಿಸ್ ವರಿಷ್ಠಾಧಿಕಾರಿಗಳು, ಕರ್ನಾಟಕ ಲೋಕಾಯುಕ್ತ ವಿಜಯಪುರ ಇವರಿಂದ ಈ ಪ್ರಕರಣಕ್ಕೆ ಸಂಬಂಧಿಸಿದಂತೆ ರಾಸಾಯನಿಕ ವರದಿ ಮತ್ತು ಆರ್ಟಿಕಲಗಳನ್ನು ಮೆಮೊದೊಂದಿಗೆ ಕಳುಹಿಸಿ, ಸದರಿ ದಾಖಲೆಗಳನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಬೇಕೆಂದು ಸೂಚಿಸಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರ:

ಪ್ರಶ್ನೆ:11.ಪ್ರಾ.ಸಾ.12 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ನಂತರ ಚಾಸಾ–23 ರವರ ನಿರ್ದೇಶನದಂತೆ ರಾಸಾಯನಿಕ ವರದಿ ಮತ್ತು ಮುದ್ದೆಮಾಲುಗಳನ್ನು ನಿ.ಪಿ.36 ರ ಮನವಿಯೊಂದಿಗೆ ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರ:

ಪ್ರಶ್ನೆ:12. ಪ್ರಾ.ಸಾ.13 ಸದಾಶಿವ ತಂದೆ ಸನಗೊಂಡ ಕೊಟ್ಯಾಳ, ಆಗಿನ ವಿಜಯಪುರ ಎಸಿಬಿ ಪೋಲಿಸ್ ಠಾಣೆಯ ಪೋಲಿಸ್ ಪೇದೆ, ತಮ್ಮ ಸಾಕ್ಷ್ಯದಲ್ಲಿ, ದಿ: 08.01.2020 ರಂದು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಪ್ರಾಯೋಗಿಕ ಪಂಚನಾಮೆ ಮತ್ತು ದಾಳಿ ಪಂಚನಾಮೆಗಳ ಕಾಲದಲ್ಲಿ ಚಾಸಾ–1 ರವರೊಂದಿಗೆ ಹಾಜರಿದ್ದು, ತನಿಖಾಧಿಕಾರಿಗಳು ಸೂಚಿಸಿದ ಮೇರೆಗೆ ಫೋಟೋಗಳನ್ನು ತೆಗೆದಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರ:

ಪ್ರಶ್ನೆ:13. ಪ್ರಾ.ಸಾ.13 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಆ ಬಗ್ಗೆ ಅವರು ದಿ: 10.01.2020 ರಂದು ಕಲಂ.65(ಬಿ) ಸಾಕ್ಷ್ಯಾಧಿನಿಮಯದಡಿ ನಿ.ಪಿ.27 ರಂತೆ ಪ್ರಮಾಣ

ಪತ್ರವನ್ನು ತನಿಖಾಧಿಕಾರಿಯವರಿಗೆ ನೀಡಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರ:

ಪ್ರಶ್ನೆಃ14. ಫ್ರಾ.ಸಾ.14 ಮಹೇಶ ತಂದೆ ನಾಗಪ್ಪ ಪೂಜಾರಿ, ಆಗಿನ ಎಸಿಬಿ ಪೋಲಿಸ್ ಠಾಣೆಯ ಪೋಲಿಸ್ ಮುಖ್ಯ ಪೇದೆ, ತಮ್ಮ ಸಾಕ್ಷ್ಯದಲ್ಲಿ, ದಿ: 08.01.2020 ರಂದು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಚಾಸಾ–20 ರವರು ಸೂಚಿಸಿದಂತೆ ನಿ.ಪಿ.2 ರಂತೆ ಪ್ರಯೋಗಿಕ ಪಂಚನಾಮೆಯನ್ನು ಬೆರಳಚ್ಚು ಮಾಡಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರ:

ಪ್ರಶ್ನೆಃ15.ಫ್ರಾ.ಸಾ.14 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಆ ಸಮಯದಲ್ಲಿ ದೂರುದಾರರು ಹಾಜರು ಪಡಿಸಿದ್ದ ಮೊಬೈಲ ಫೋನನಲ್ಲಿದ್ದ ಆರೋಪಿಯಾದ ನಿಮ್ಮ ಮತ್ತು ದೂರುದಾರರ ಸಂಭಾಷಣೆಯನ್ನು ಲ್ಯಾಪಟಾಪ ಮೂಲಕ ಎರಡು ಸಿಡಿಗಳಲ್ಲಿ ದಾಖಲಿಸಿ, ತನಿಖಾಧಿಕಾರಿಗಳಿಗೆ ನೀಡಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರ:

ಪ್ರಶ್ನೆಃ16. ಪ್ರಾ.ಸಾ.14 ರವರು ಮುಂದುವರೆದ ತಮ್ಮ ಸಾಕ್ಷ್ಯದಲ್ಲಿ, ಆ ಬಗ್ಗೆ ದಿ: 09.01.2020 ರಂದು ಕಲಂ.65(ಬಿ) ಭಾರತೀಯ ಸಾಕ್ಷ್ಯಾಧಿನಿಯಮದಡಿ ನಿ.ಪಿ. 26 ರಂತೆ ಪ್ರಮಾಣ ಪತ್ರವನ್ನು ತನಿಖಾಧಿಕಾರಿಗಳಿಗೆ ನೀಡಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರ:

ಪ್ರಶ್ನೆಃ17. ನಿಮ್ಮ ಪರ ಸಾಕ್ಷಿ ಮಾಡಿಸುವುದು ಹಾಗೂ ದಾಖಲೆ ಹಾಜರು ಪಡೆಸುವುದು ಇದೆಯಾ ?

ಉತ್ತರಃ

ಪ್ರಶ್ನೆ 18. ನೀವು ಬೇರೆ ಏನಾದರೂ ಹೇಳುವುದಿದೆಯಾ ?

ಉತ್ತರಃ

(ಈ ಮೇಲ್ಕಾಣಿಸಿದ ಆರೋಪಣೆಯನ್ನು ಆರೋಪಿಗೆ ಗೊತ್ತಿದ್ದ ಭಾಷೆಯಲ್ಲಿ ಓದಿ ಹೇಳಿ ತಿಳಿಸಿದ ನಂತರ ಹೇಳಿಕೆಯನ್ನು ಪಡೆದು ನಮೂದಿಸಿದ್ದು ಸಂಪೂರ್ಣ ಮತ್ತು ಸತ್ಯವಾಗಿರುತ್ತದೆಂದು ಪ್ರಮಾಣೀಕರಿಸಿದ್ದೇನೆ.)

**Sd/-**

ಸ್ಥಳ : ವಿಜಯಪುರ
ದಿನಾಂಕಃ 02.06.2026

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ವಿಜಯಪುರ.